



(ಅವತೀರ್ಣ - ಮಕ್ಕಾದಲ್ಲಿ)

ಪರಮ ದಯಾಮಯನೂ ಕರುಣಾನಿಧಿಯೂ ಆದ ಅಲ್ಲಾಹನ ನಾಮದಿಂದ

بِسْمِ اللّٰهِ الرَّحْمٰنِ الرَّحِيْمِ

1. ಅಲಿಫ್ ಲಾಮ್ಮೀಮ್.

الٓمّٓ ①

2. "ನಾವು ವಿಶ್ವಾಸವಿರಿಸಿದೆವು" ಎಂದ ಮಾತ್ರಕ್ಕೆ ಅವರನ್ನು ಬಿಟ್ಟು ಬಿಡಲಾಗುವುದೆಂದೂ ಅವರನ್ನು ಪರೀಕ್ಷೆಗೊಳಪಡಿಸಲಾಗದೆಂದೂ ಜನರು ತಿಳಿದುಕೊಂಡಿರುವರೇ?

اَحَسِبَ النَّاسُ اَنْ يُّتْرَكُوْٓا اَنْ يَّقُوْلُوْٓا اٰمَنَّا وَهُمْ لَا يُفْتَنُوْنَ ②

3. ವಸ್ತುತಃ ನಾವು ಇವರಿಗಿಂತ ಮುಂಚೆ ಗತಿಸಿ ಹೋದವರನ್ನು ಪರೀಕ್ಷೆಗೊಳಪಡಿಸಿದ್ದೆವು. ಯಾರು ಸತ್ಯವಾದಿಗಳು ಮತ್ತು ಯಾರು ಸುಳ್ಳುಗಾರರೆಂದು ಅಲ್ಲಾಹನಿಗೆ ನಿಶ್ಚಯವಾಗಿಯೂ ನೋಡ ಬೇಕಾಗಿದೆ.

وَلَقَدْ فَتَنَّا الَّذِيْنَ مِنْ قَبْلِهِمْ فَلَيَعْلَمَنَّ اللّٰهُ الَّذِيْنَ صَدَقُوْا وَلَيَعْلَمَنَّ الْكٰذِبِيْنَ ③

4. ದುಷ್ಕರ್ಮವೆಸಗುತ್ತಿರುವವರು[1], ಅವರು ನಮ್ಮನ್ನು ಸೋಲಿಸು ವರೆಂದು ಭಾವಿಸುತ್ತಿದ್ದಾರೆಯೇ? ಮಹಾ ತಪ್ಪು ತೀರ್ಮಾನವನ್ನು ಅವರು ಕೈಗೊಳ್ಳುತ್ತಿದ್ದಾರೆ.

اَمْ حَسِبَ الَّذِيْنَ يَعْمَلُوْنَ السَّيِّاٰتِ اَنْ يَّسْبِقُوْنَا ؕ سَآءَ مَا يَحْكُمُوْنَ ④

5. ಅಲ್ಲಾಹನ ಭೇಟಿಯನ್ನು ನಿರೀಕ್ಷಿಸುತ್ತಿರುವವನು ಅಲ್ಲಾಹನು ನಿಗದಿಗೊಳಿಸಿರುವ ಸಮಯವು ಖಂಡಿತವಾಗಿಯೂ ಬರಲಿದೆ (ಎಂದು ತಿಳಿದಿರಬೇಕು) ಮತ್ತು ಅಲ್ಲಾಹನು ಸರ್ವಶ್ರುತನೂ ಸರ್ವಜ್ಞನೂ ಆಗಿರುತ್ತಾನೆ.

مَنْ كَانَ يَرْجُوْا لِقَآءَ اللّٰهِ فَاِنَّ اَجَلَ اللّٰهِ لَاٰتٍ ؕ وَهُوَ السَّمِيْعُ الْعَلِيْمُ ⑤

6. ಹೋರಾಟ ನಡೆಸುವವನು ತನ್ನ ಹಿತಕ್ಕಾಗಿಯೇ ನಡೆಸುವನು.[2]

وَمَنْ جَاهَدَ فَاِنَّمَا يُجَاهِدُ لِنَفْسِهٖ ؕ

1. ಸತ್ಯವಿಶ್ವಾಸ ಸ್ವೀಕರಿಸಿದವರ ಮೇಲೆ ಅಕ್ರಮವೆಸಗುತ್ತಿದ್ದ ಮತ್ತು ಇಸ್ಲಾಮಿನ ಸಂದೇಶಕ್ಕೆ ಮಸಿ ಬಳಿಯಲು ಅತ್ಯಂತ ಹೇಯತಂತ್ರಗಳನ್ನು ಬಳಸುತ್ತಿದ್ದವರ ಕುರಿತು ಈ ಮಾತು ಹೇಳಲಾಗಿದೆ ಎಂದು ವಿವರಣಾಶೈಲಿಯಿಂದ ವ್ಯಕ್ತವಾಗುತ್ತದೆ.
2. ಮುಜಾಹಿದಃ ಅಥವಾ ಹೋರಾಟ ಎಂದರೆ ಸತ್ಯಧರ್ಮದ ಉತ್ತುಂಗತೆಗಾಗಿ ಪ್ರಾಣವನ್ನು ಪಣಕ್ಕಿಟ್ಟು ಹೋರಾಡುವುದಾಗಿದೆ.

ನಿಶ್ಚಯವಾಗಿಯೂ ಅಲ್ಲಾಹನು ಸಕಲ ಲೋಕದವರಿಂದ ನಿರ ಪೇಕ್ಷನು.[3]

اِنَّ اللّٰهَ لَغَنِيٌّ عَنِ الْعٰلَمِيْنَ ﴿٦﴾

7. ಮತ್ತು ಸತ್ಯವಿಶ್ವಾಸವಿರಿಸುವವರ ಮತ್ತು ಸತ್ಕರ್ಮವೆಸಗುವವರ ಪಾಪಗಳನ್ನು ನಾವು ಅವರಿಂದ ದೂರೀಕರಿಸುವೆವು ಮತ್ತು ಅವರಿಗೆ ಅವರ ಅತ್ಯುತ್ತಮ ಕರ್ಮಗಳ ಸತ್ಫಲ ನೀಡುವೆವು.

وَالَّذِيْنَ اٰمَنُوْا وَعَمِلُوا الصّٰلِحٰتِ لَنُكَفِّرَنَّ عَنْهُمْ سَيِّاٰتِهِمْ وَلَنَجْزِيَنَّهُمْ اَحْسَنَ الَّذِيْ كَانُوْا يَعْمَلُوْنَ ﴿٧﴾

8. ತನ್ನ ಮಾತಾಪಿತರೊಂದಿಗೆ ಸೌಜನ್ಯದಿಂದ ವರ್ತಿಸಬೇಕೆಂದು ನಾವು ಮಾನವನಿಗೆ ಉಪದೇಶಿಸಿದೆವು. ಆದರೆ (ನನ್ನ ಸಹಭಾಗಿಯೆಂದು) ನೀನು ಅರಿಯದಿರುವ ಯಾವುದಾದರೊಂದನ್ನು (ಆರಾಧ್ಯನನ್ನು) ನನ್ನ ಸಹಭಾಗಿಯನ್ನಾಗಿ ಮಾಡಬೇಕೆಂದು ಅವರು ನಿನ್ನ ಮೇಲೆ ಒತ್ತಡ ಹಾಕಿದರೆ, ಅವರನ್ನು ಅನುಸರಿಸಬೇಡ.[4] ನೀವೆಲ್ಲರೂ ನನ್ನ ಕಡೆಗೇ ಮರಳಿ ಬರ ಬೇಕಾಗಿದೆ. ಆಗ ನೀವು ಏನು ಮಾಡುತ್ತಿದ್ದಿರಿ ಎಂಬುದನ್ನು ನಾನು ನಿಮಗೆ ತೋರಿಸಿ ಕೊಡುವೆನು.

وَوَصَّيْنَا الْاِنْسَانَ بِوَالِدَيْهِ حُسْنًا ۭ وَاِنْ جَاهَدٰكَ لِتُشْرِكَ بِيْ مَا لَيْسَ لَكَ بِهٖ عِلْمٌ فَلَا تُطِعْهُمَا ۭ اِلَيَّ مَرْجِعُكُمْ فَاُنَبِّئُكُمْ بِمَا كُنْتُمْ تَعْمَلُوْنَ ﴿٨﴾

9. ಸತ್ಯವಿಶ್ವಾಸ ಸ್ವೀಕಾರ ಮಾಡಿದವರನ್ನು ಮತ್ತು ಸತ್ಕರ್ಮವೆಸಗಿದವರನ್ನು ನಾವು ಖಂಡಿತ ಸಜ್ಜನರ ಸಾಲಿಗೆ ಸೇರಿಸಿಕೊಳ್ಳುವೆವು.

وَالَّذِيْنَ اٰمَنُوْا وَعَمِلُوا الصّٰلِحٰتِ لَنُدْخِلَنَّهُمْ فِي الصّٰلِحِيْنَ ﴿٩﴾

10. ನಾವು ಅಲ್ಲಾಹನ ಮೇಲೆ ವಿಶ್ವಾಸವಿರಿಸಿದ್ದೇವೆಂದು ಹೇಳುವವನು ಜನರಲ್ಲಿದ್ದಾನೆ. ಆದರೆ, ಅವನು ಅಲ್ಲಾಹನ ವಿಷಯದಲ್ಲಿ ಸತಾಯಿಸಲ್ಪಟ್ಟಾಗ ಜನರ ಕಡೆಯಿಂದ ಬರುವಂತಹ ಪರೀಕ್ಷೆಯನ್ನು ಅಲ್ಲಾಹನ ಯಾತನೆಯಂತೆ ಗ್ರಹಿಸಿಕೊಂಡನು. ನಿನ್ನ ಪ್ರಭುವಿನ ಕಡೆಯಿಂದ ಸಹಾಯವೊದಗಿದಾಗ ಇವನೇ, "ನಾವಂತೂ ನಿಮ್ಮ ಜೊತೆಗಿದ್ದೆವು" ಎಂದು ಹೇಳುವನು. ಲೋಕವಾಸಿಗಳ ಮನಸ್ಸಿನ ಸ್ಥಿತಿಯು ಅಲ್ಲಾಹನಿಗೆ ಚೆನ್ನಾಗಿ ತಿಳಿದಿಲ್ಲವೇ?

وَمِنَ النَّاسِ مَنْ يَّقُوْلُ اٰمَنَّا بِاللّٰهِ فَاِذَآ اُوْذِيَ فِي اللّٰهِ جَعَلَ فِتْنَةَ النَّاسِ كَعَذَابِ اللّٰهِ ۭ وَلَىِٕنْ جَاۗءَ نَصْرٌ مِّنْ رَّبِّكَ لَيَقُوْلُنَّ اِنَّا كُنَّا مَعَكُمْ ۭ اَوَلَيْسَ اللّٰهُ بِاَعْلَمَ بِمَا فِيْ صُدُوْرِ الْعٰلَمِيْنَ ﴿١٠﴾

11. ಸತ್ಯವಿಶ್ವಾಸಿಗಳು ಯಾರು ಹಾಗೂ ಕಪಟವಿಶ್ವಾಸಿಗಳು ಯಾರು ಎಂಬುದು ನಿಶ್ಚಯವಾಗಿಯೂ ಅಲ್ಲಾಹನಿಗೆ ಅರಿಯಲೇಬೇಕಾಗಿದೆ.

وَلَيَعْلَمَنَّ اللّٰهُ الَّذِيْنَ اٰمَنُوْا وَلَيَعْلَمَنَّ الْمُنٰفِقِيْنَ ﴿١١﴾

3. ಅರ್ಥಾತ್- ಅಲ್ಲಾಹನು ನಿಮ್ಮೊಡನೆ ಹೋರಾಟದ ಬೇಡಿಕೆಯನ್ನು ಮುಂದಿಡಲು ಕಾರಣ ಅವನಿಗೆ ಅದರ ಅಗತ್ಯವಿದೆ ಎಂದಲ್ಲ (ಶಾಂತಂ ಪಾಪಂ) ಬದಲಾಗಿ ಇದು ನಿಮ್ಮ ನೈತಿಕ ಮತ್ತು ಆಧ್ಯಾತ್ಮಿಕ ಪ್ರಗತಿಯ ಉಪಾಧಿಯಾಗಿದೆ.

4. ಮಕ್ಕಾದಲ್ಲಿ ವಿಶ್ವಾಸ ಸ್ವೀಕರಿಸಿದ್ದ ಯುವಕರ ಮೇಲೆ ಅವರ ತಂದೆ-ತಾಯಿಗಳು ಸತ್ಯವಿಶ್ವಾಸದಿಂದ ದೂರವಿರುವಂತೆ ಒತ್ತಾಯಿಸುತ್ತಿದ್ದರು. ಅದಕ್ಕಾಗಿ, ತಂದೆ-ತಾಯಿಗಳ ಮೇಲೆ ಕೆಲವೊಂದು ಹಕ್ಕುಗಳು ಇವೆ ನಿಜ. ಆದರೆ ಮಕ್ಕಳನ್ನು ದೇವ ಮಾರ್ಗದಿಂದ ತಡೆಯುವ ಹಕ್ಕು ಅವರಿಗಿಲ್ಲ ಎಂದು ಹೇಳಲಾಗುತ್ತಿದೆ.

12. ಈ ಸತ್ಯನಿಷೇಧಿಗಳು ಸತ್ಯವಿಶ್ವಾಸಿಗಳೊಡನೆ, "ನೀವು ನಮ್ಮ ಮಾರ್ಗವನ್ನನುಸರಿಸಿರಿ. ನಿಮ್ಮ ದೋಷಗಳನ್ನು ನಾವು ನಮ್ಮ ಮೇಲೆ ಹೊತ್ತುಕೊಳ್ಳುತ್ತೇವೆ" ಎನ್ನುತ್ತಾರೆ. ವಸ್ತುತಃ ಇವರ ದೋಷಗಳ ಪೈಕಿ ಸ್ವಲ್ಪವನ್ನೂ ಅವರು ತಮ್ಮ ಮೇಲೆ ಹೊತ್ತುಕೊಳ್ಳುವವರಲ್ಲ. ನಿಸ್ಸಂದೇಹವಾಗಿಯೂ ಅವರು ಸುಳ್ಳು ಹೇಳುತ್ತಿದ್ದಾರೆ.

وَقَالَ الَّذِيْنَ كَفَرُوْا لِلَّذِيْنَ اٰمَنُوا
اتَّبِعُوْا سَبِيْلَنَا وَلْنَحْمِلْ خَطٰيٰكُمْؕ
وَمَا هُمْ بِحٰمِلِيْنَ مِنْ خَطٰيٰهُمْ مِّنْ
شَيْءٍؕ اِنَّهُمْ لَكٰذِبُوْنَ ⑫

13. ಖಂಡಿತವಾಗಿಯೂ ಅವರು ತಮ್ಮ ಹೊರೆಯನ್ನೂ ಹೊರುವರು ಮತ್ತು ತಮ್ಮ ಹೊರೆಗಳೊಂದಿಗೆ ಇತರ ಅನೇಕ ಹೊರೆಗಳನ್ನೂ ಹೊರುವರು.[5] ಪುನರುತ್ಥಾನ ದಿನ, ಅವರು ಮಾಡುತ್ತಿದ್ದ ಸುಳ್ಳು ಸೃಷ್ಟನೆಗಳ ವಿಚಾರಣೆಯು ಖಂಡಿತವಾಗಿಯೂ ನಡೆಯುವುದು.

وَلَيَحْمِلُنَّ اَثْقَالَهُمْ وَاَثْقَالًا مَّعَ
اَثْقَالِهِمْ ز وَلَيُسْـَٔلُنَّ يَوْمَ الْقِيٰمَةِ
عَمَّا كَانُوْا يَفْتَرُوْنَ ⑬ ع

14. ನಾವು ನೂಹರನ್ನು ಅವರ ಜನಾಂಗದ ಕಡೆಗೆ ಕಳುಹಿಸಿದೆವು. ಅವರು ಅವರ ನಡುವೆ ಐವತ್ತು ಕಡಿಮೆ ಒಂದು ಸಾವಿರ ವರ್ಷಗಳಿದ್ದರು. ಕೊನೆಗೆ ಆ ಜನರು ಅಕ್ರಮಿಗಳಾಗಿದ್ದ ಸ್ಥಿತಿಯಲ್ಲಿ ಅವರನ್ನು ಚಂಡಮಾರುತವು ಬಂದಾವರಿಸಿತು.

وَلَقَدْ اَرْسَلْنَا نُوْحًا اِلٰى قَوْمِهٖ فَلَبِثَ
فِيْهِمْ اَلْفَ سَنَةٍ اِلَّا خَمْسِيْنَ عَامًاؕ
فَاَخَذَهُمُ الطُّوْفَانُ وَهُمْ ظٰلِمُوْنَ ⑭

15. ತರುವಾಯ ನೂಹರನ್ನೂ ನಾವೆಯವರನ್ನೂ ನಾವು ರಕ್ಷಿಸಿಕೊಂಡೆವು ಮತ್ತು ಲೋಕದ ಜನತೆಗಾಗಿ ಅದನ್ನೊಂದು ಪಾಠಬೋಧಕ ಸಂಕೇತವಾಗಿ ಮಾಡಿಬಿಟ್ಟೆವು.[6]

فَاَنْجَيْنٰهُ وَاَصْحٰبَ السَّفِيْنَةِ وَجَعَلْنٰهَآ
اٰيَةً لِّلْعٰلَمِيْنَ ⑮

16. ಮತ್ತು ಇಬ್‌ರಾಹೀಮರನ್ನು ರವಾನಿಸಿದೆವು. ಅವರು ತಮ್ಮ ಜನಾಂಗದೊಡನೆ ಹೀಗೆ ಹೇಳಿದ ಸಂದರ್ಭ(ವನ್ನು ಸ್ಮರಿಸಿರಿ:) "ಅಲ್ಲಾಹನ ದಾಸ್ಯ-ಆರಾಧನೆ ಮಾಡಿರಿ ಮತ್ತು ಅವನನ್ನು ಭಯಪಡಿರಿ. ನೀವು ಅರಿಯುವವರಾಗಿದ್ದರೆ ಇದು ನಿಮಗೆ ಉತ್ತಮವಾಗಿದೆ.

وَاِبْرٰهِيْمَ اِذْ قَالَ لِقَوْمِهِ اعْبُدُوا
اللّٰهَ وَاتَّقُوْهُؕ ذٰلِكُمْ خَيْرٌ لَّكُمْ
اِنْ كُنْتُمْ تَعْلَمُوْنَ ⑯

17. ನೀವು ಅಲ್ಲಾಹನನ್ನು ಬಿಟ್ಟು ಯಾವುದನ್ನೆಲ್ಲಾ ಪೂಜಿಸುತ್ತೀರೋ ಅವು ಕೇವಲ ವಿಗ್ರಹಗಳಾಗಿವೆ ಮತ್ತು ನೀವು ಒಂದು ಸುಳ್ಳನ್ನು ಸೃಷ್ಟಿಸುತ್ತಿರುವಿರಿ. ವಾಸ್ತವದಲ್ಲಿ ಅಲ್ಲಾಹನ ಹೊರತು ನೀವು ಯಾರನ್ನು ಪೂಜಿಸುತ್ತೀರೋ ಅವರು ನಿಮಗೆ ಯಾವುದೇ

اِنَّمَا تَعْبُدُوْنَ مِنْ دُوْنِ اللّٰهِ اَوْثَانًا
وَّتَخْلُقُوْنَ اِفْكًاؕ اِنَّ الَّذِيْنَ
تَعْبُدُوْنَ مِنْ دُوْنِ اللّٰهِ لَا يَمْلِكُوْنَ

5. ಅರ್ಥಾತ್- ಸ್ವತಃ ಪಥಭ್ರಷ್ಟನಾದುದರ ಹೊರೆ ಒಂದಾದರೆ ಇತರರನ್ನು ಪಥಭ್ರಷ್ಟಗೊಳಿಸಿದ ಅಥವಾ ಪಥಭ್ರಷ್ಟನಾಗಲು ನಿರ್ಬಂಧಿಸಿದ ಇತರ ಹೊರೆಗಳು.

6. ಅರ್ಥಾತ್- ಆ ನೌಕೆಯನ್ನು ಅಥವಾ ನೂಹ್‌ರ(ಅ) ಸಮುದಾಯದ ಮೇಲೆ ಯಾತನೆ ಎರಗಿಸಿದ ಆ ಘಟನೆಯನ್ನು ಪಾಠಬೋಧಕ ಕುರುಹನ್ನಾಗಿ ಮಾಡಿದನು.

ಜೀವನಾಧಾರ ನೀಡುವ ಅಧಿಕಾರ ಹೊಂದಿಲ್ಲ. ಅಲ್ಲಾಹನಿಂದ ಜೀವನಾಧಾರ ಯಾಚಿಸಿರಿ. ಅವನ ದಾಸ್ಯ-ಆರಾಧನೆಯನ್ನೇ ಮಾಡಿರಿ ಮತ್ತು ಅವನಿಗೆ ಕೃತಜ್ಞತೆ ಸಲ್ಲಿಸಿರಿ. ನೀವು ಅವನ ಕಡೆಗೇ ಮರಳಿಸಲ್ಪಡಲಿರುವಿರಿ.

لَكُمْ رِزْقًا فَابْتَغُوا عِنْدَ اللَّهِ الرِّزْقَ
وَاعْبُدُوهُ وَاشْكُرُوا لَهُ ۖ إِلَيْهِ
تُرْجَعُونَ ﴿١٧﴾

18. ನೀವು ಸುಳ್ಳಾಗಿಸುತ್ತೀರಾದರೆ ನಿಮಗಿಂತ ಮುಂಚೆ ಅನೇಕ ಜನಾಂಗಗಳು ಸುಳ್ಳಾಗಿಸಿವೆ. ಸುಸ್ಪಷ್ಟವಾಗಿ ಸಂದೇಶವನ್ನು ತಲಪಿಸಿ ಬಿಡುವ ಹೊರತು ಯಾವ ಹೊಣೆಗಾರಿಕೆಯೂ ಸಂದೇಶವಾಹಕನ ಮೇಲಿಲ್ಲ."

وَإِنْ تُكَذِّبُوا فَقَدْ كَذَّبَ أُمَمٌ
مِنْ قَبْلِكُمْ ۖ وَمَا عَلَى الرَّسُولِ إِلَّا
الْبَلَاغُ الْمُبِينُ ﴿١٨﴾

19. ಅಲ್ಲಾಹನು ಸೃಷ್ಟಿಯ ಆರಂಭ ಹೇಗೆ ಮಾಡುತ್ತಾನೆ ಅನಂತರ ಹೇಗೆ ಅದರ ಪುನರಾವರ್ತನೆ ಮಾಡುತ್ತಾನೆ ಎಂಬುದನ್ನು ಇವರೆಂದೂ ನೋಡಲಿಲ್ಲವೇ? ನಿಶ್ಚಯವಾಗಿಯೂ ಇದು (ಈ ಪುನರಾವರ್ತನೆ) ಅಲ್ಲಾಹನಿಗೆ ಅತಿ ಸುಲಭವಾಗಿದೆ.

أَوَلَمْ يَرَوْا كَيْفَ يُبْدِئُ اللَّهُ الْخَلْقَ
ثُمَّ يُعِيدُهُ ۚ إِنَّ ذَٰلِكَ عَلَى اللَّهِ يَسِيرٌ ﴿١٩﴾

20. ಅವನು ಸೃಷ್ಟಿಯ ಆರಂಭ ಹೇಗೆ ಮಾಡಿರುತ್ತಾನೆಂಬುದನ್ನು ಭೂಮಿಯ ಮೇಲೆ ಸಂಚರಿಸಿ ನೋಡಿರಿ, ಎಂದು ಅವರೊಡನೆ ಹೇಳಿರಿ. ಮುಂದೆ ಅಲ್ಲಾಹನು ಎರಡನೆಯ ಬಾರಿಯೂ ಜೀವ ನೀಡುವನು. ನಿಶ್ಚಯವಾಗಿಯೂ ಅಲ್ಲಾಹನು ಸಕಲ ವಸ್ತುಗಳ ಮೇಲೆ ಸಾಮರ್ಥ್ಯವುಳ್ಳವನು.

قُلْ سِيرُوا فِي الْأَرْضِ فَانْظُرُوا كَيْفَ
بَدَأَ الْخَلْقَ ۚ ثُمَّ اللَّهُ يُنْشِئُ النَّشْأَةَ
الْآخِرَةَ ۚ إِنَّ اللَّهَ عَلَىٰ كُلِّ شَيْءٍ قَدِيرٌ ﴿٢٠﴾

21. ಅವನು ತಾನಿಚ್ಛಿಸುವವರಿಗೆ ಶಿಕ್ಷೆ ನೀಡುತ್ತಾನೆ. ತಾನಿಚ್ಛಿಸುವವರ ಮೇಲೆ ಕೃಪೆ ತೋರುತ್ತಾನೆ. ನೀವು ಅವನ ಕಡೆಗೆ ಮರಳಿಸಲ್ಪಡುವಿರಿ.

يُعَذِّبُ مَنْ يَشَاءُ وَيَرْحَمُ مَنْ يَشَاءُ ۖ
وَإِلَيْهِ تُقْلَبُونَ ﴿٢١﴾

22. ನೀವು ಭೂಮಿಯಲ್ಲಾಗಲಿ ಆಕಾಶದಲ್ಲಾಗಲಿ (ಅವನನ್ನು) ಸೋಲಿಸಲಾರಿರಿ. ಅಲ್ಲಾಹನಿಂದ ರಕ್ಷಿಸತಕ್ಕ ಯಾವ ರಕ್ಷಕ ಮಿತ್ರನೂ ಸಹಾಯಕನೂ ನಿಮಗಿಲ್ಲ.

وَمَا أَنْتُمْ بِمُعْجِزِينَ فِي الْأَرْضِ
وَلَا فِي السَّمَاءِ ۖ وَمَا لَكُمْ مِنْ دُونِ
اللَّهِ مِنْ وَلِيٍّ وَلَا نَصِيرٍ ﴿٢٢﴾

23. ಯಾರು ಅಲ್ಲಾಹನ ಸೂಕ್ತಗಳನ್ನೂ ಅವನ ಭೇಟಿಯನ್ನೂ ನಿಷೇಧಿಸಿದ್ದಾರೋ ಅವರು ನನ್ನ ಕೃಪೆಯಿಂದ ನಿರಾಶರಾಗಿ ಹೋಗಿದ್ದಾರೆ[7] ಮತ್ತು ಅವರಿಗೆ ವೇದನಾಯುಕ್ತ ಶಿಕ್ಷೆ ಇದೆ.

وَالَّذِينَ كَفَرُوا بِآيَاتِ اللَّهِ وَلِقَائِهِ
أُولَٰئِكَ يَئِسُوا مِنْ رَحْمَتِي وَأُولَٰئِكَ
لَهُمْ عَذَابٌ أَلِيمٌ ﴿٢٣﴾

7. ಅರ್ಥಾತ್- ಅವರಿಗೆ ನನ್ನ ಅನುಗ್ರಹದಲ್ಲಿ ಯಾವುದೇ ರೀತಿಯ ಪಾಲಿಲ್ಲ. ನನ್ನ ಅನುಗ್ರಹದಲ್ಲಿ ಪಾಲು ಪಡೆಯುವ ನಿರೀಕ್ಷೆಯನ್ನಿಟ್ಟುಕೊಳ್ಳುವಂತಹ ಯಾವುದೇ ಅವಕಾಶ ಅವರಿಗಿಲ್ಲ. ಅವರು ಪರಲೋಕವನ್ನೇ ನಿರಾಕರಿಸಿದರು. ದೇವನ ಮುಂದೆ ಹಾಜರಾಗಲಿಕ್ಕಿದೆ ಎಂಬುದನ್ನು ಸಮ್ಮತಿಸಲಿಲ್ಲ. ಅದರ ಅರ್ಥ ಅವರು ದೇವನ ಕ್ಷಮೆ ಮತ್ತು ಪಾಪ ವಿಮೋಚನೆ ಬಗ್ಗೆ ಯಾವುದೇ ನಿರೀಕ್ಷೆ ಇಟ್ಟುಕೊಂಡಿರಲಿಲ್ಲ ಎಂದಾಗಿದೆ.

24. ಇನ್ನು, ಇಬ್‌ರಾಹೀಮರ ಜನಾಂಗದ ಉತ್ತರವು, "ಇವನನ್ನು ಕೊಂದು ಹಾಕಿರಿ ಇಲ್ಲವೇ ಇವನನ್ನು ಸುಟ್ಟು ಹಾಕಿರಿ" ಎನ್ನುವ ಹೊರತು ಬೇರೇನೂ ಇರಲಿಲ್ಲ. ಕೊನೆಗೆ ಅಲ್ಲಾಹನು ಅವರನ್ನು ಅಗ್ನಿಯಿಂದ ರಕ್ಷಿಸಿದನು. ನಿಶ್ಚಯವಾಗಿಯೂ ಇದರಲ್ಲಿ ಸತ್ಯ ವಿಶ್ವಾಸವಿರಿಸುವವರಿಗೆ ನಿದರ್ಶನಗಳಿವೆ.

فَمَا كَانَ جَوَابَ قَوْمِهٖٓ اِلَّآ اَنْ قَالُوا اقْتُلُوْهُ اَوْ حَرِّقُوْهُ فَاَنْجٰىهُ اللّٰهُ مِنَ النَّارِ ۭ اِنَّ فِيْ ذٰلِكَ لَاٰيٰتٍ لِّقَوْمٍ يُّؤْمِنُوْنَ ﴿٢٤﴾

25. ಮತ್ತು ಅವರು ಹೀಗೆಂದರು; "ನೀವು ಲೌಕಿಕ ಜೀವನದಲ್ಲಂತೂ ಅಲ್ಲಾಹನನ್ನು ಬಿಟ್ಟು ವಿಗ್ರಹಗಳನ್ನು ಪರಸ್ಪರ ಪ್ರೇಮದ ಸಾಧನವನ್ನಾಗಿ ಮಾಡಿಕೊಂಡಿರುವಿರಿ.[8] ಆದರೆ ಪುನರುತ್ಥಾನ ದಿನ ನೀವು ಪರಸ್ಪರರರನ್ನು ನಿರಾಕರಿಸುವಿರಿ ಮತ್ತು ಪರಸ್ಪರರರನ್ನು ಶಪಿಸುವಿರಿ. ನರಕಾಗ್ನಿಯು ನಿಮ್ಮ ನಿವಾಸವಾಗುವುದು ಮತ್ತು ಯಾರೂ ನಿಮ್ಮ ಸಹಾಯಕನಾಗಲಾರನು."

وَقَالَ اِنَّمَا اتَّخَذْتُمْ مِّنْ دُوْنِ اللّٰهِ اَوْثَانًا ۙ مَّوَدَّةَ بَيْنِكُمْ فِي الْحَيٰوةِ الدُّنْيَا ۚ ثُمَّ يَوْمَ الْقِيٰمَةِ يَكْفُرُ بَعْضُكُمْ بِبَعْضٍ وَّيَلْعَنُ بَعْضُكُمْ بَعْضًا ۡ وَّمَاْوٰىكُمُ النَّارُ وَمَا لَكُمْ مِّنْ نّٰصِرِيْنَ ﴿٢٥﴾

26. ಆಗ ಲೂತರು ಅವರ ಮೇಲೆ ವಿಶ್ವಾಸವಿರಿಸಿದರು ಮತ್ತು ಇಬ್‌ರಾಹೀಮರು, ನಾನು ನನ್ನ ಪ್ರಭುವಿನತ್ತ 'ವಲಸೆ' ಹೋಗುತ್ತೇನೆ. ಅವನು ಮಹಾ ಪ್ರಬಲನೂ ಯುಕ್ತಿಪೂರ್ಣನೂ ಆಗಿರುತ್ತಾನೆಂದರು.

فَاٰمَنَ لَهٗ لُوْطٌ ۘ وَقَالَ اِنِّيْ مُهَاجِرٌ اِلٰى رَبِّيْ ۭ اِنَّهٗ هُوَ الْعَزِيْزُ الْحَكِيْمُ ﴿٢٦﴾

27. ತರುವಾಯ ನಾವು ಅವರಿಗೆ ಇಸ್‌ಹಾಕ್ ಮತ್ತು ಯಅ್‌ಕೂಬ್ (ರಂತಹ ಸಂತಾನ) ದಯಪಾಲಿಸಿದೆವು. ಅವರ ಸಂತತಿಯಲ್ಲಿ ಪ್ರವಾದಿತ್ವವನ್ನೂ ಗ್ರಂಥವನ್ನೂ ಇರಿಸಿಬಿಟ್ಟೆವು. ಅವರಿಗೆ ಈ ಲೋಕದಲ್ಲಿ ಅದರ ಸತ್ಫಲವನ್ನು ನೀಡಿದೆವು ಮತ್ತು ಪರಲೋಕದಲ್ಲಿ ಅವರು ಖಂಡಿತವಾಗಿಯೂ ಸಜ್ಜನರಲ್ಲಾಗುವರು.

وَوَهَبْنَا لَهٗٓ اِسْحٰقَ وَيَعْقُوْبَ وَجَعَلْنَا فِيْ ذُرِّيَّتِهِ النُّبُوَّةَ وَالْكِتٰبَ وَاٰتَيْنٰهُ اَجْرَهٗ فِي الدُّنْيَا ۚ وَاِنَّهٗ فِي الْاٰخِرَةِ لَمِنَ الصّٰلِحِيْنَ ﴿٢٧﴾

28. ನಾವು ಲೂತರನ್ನು ಕಳುಹಿಸಿದೆವು. ಅವರು ತಮ್ಮ ಜನಾಂಗದೊಡನೆ ಹೇಳಿದ ಆ ಸಂದರ್ಭ (ವನ್ನು ಸ್ಮರಿಸಿರಿ); "ನಿಮಗಿಂತ ಮುಂಚೆ ಲೋಕವಾಸಿಗಳಲ್ಲಿ ಯಾರೂ ಮಾಡಿರದಂತಹ ಅಶ್ಲೀಲ ಕಾರ್ಯವನ್ನು ನೀವು ಮಾಡುತ್ತೀರಿ.

وَلُوْطًا اِذْ قَالَ لِقَوْمِهٖٓ اِنَّكُمْ لَتَاْتُوْنَ الْفَاحِشَةَ ۡ مَا سَبَقَكُمْ بِهَا مِنْ اَحَدٍ مِّنَ الْعٰلَمِيْنَ ﴿٢٨﴾

29. ನೀವೇನು ಪುರುಷರ ಬಳಿಗೆ ಹೋಗುತ್ತೀರಾ? ದರೋಡೆ

اَىِٕنَّكُمْ لَتَاْتُوْنَ الرِّجَالَ وَتَقْطَعُوْنَ السَّبِيْلَ ڏ وَتَاْتُوْنَ فِيْ نَادِيْكُمُ

8. ಅರ್ಥಾತ್- ನೀವು ನಿಮ್ಮ ಸಾಮೂಹಿಕ ಜೀವನವನ್ನು ದೇವೋಪಾಸನೆಯ ಬದಲಿಗೆ ಮೂರ್ತಿಪೂಜೆಯ ಆಧಾರದಲ್ಲಿ ರೂಪಿಸಿದ್ದೀರಿ. ಲೌಕಿಕ ಜೀವನದ ಮಟ್ಟಿಗೆ ಅದು ನಿಮ್ಮ ಜನಾಂಗೀಯ ಐಕ್ಯವನ್ನು ಕಾಯ್ದಿಡಬಹುದು. ಏಕೆಂದರೆ ಇಲ್ಲಿ ಯಾವುದೇ ವಿಶ್ವಾಸದ ಆಧಾರದಲ್ಲಿ ಜನರು ಜತೆಗೂಡಬಹುದು. ಆ ವಿಶ್ವಾಸ ಸತ್ಯವಾಗಿದ್ದರೂ ಮಿಥ್ಯವಾಗಿದ್ದರೂ ಸರಿ. ಯಾವುದೇ ರೀತಿಯ ಒಮ್ಮತ ಅಥವಾ ಮಿಲನವು, ಅದೆಷ್ಟೇ ತಪ್ಪು ವಿಶ್ವಾಸದಿಂದ ಕೂಡಿದ್ದರೂ ಪರಸ್ಪರ ಸ್ನೇಹ, ನೆಂಟಸ್ಥಿಕೆ, ಸೋದರತೆ ಹಾಗೂ ಇನ್ನಿತರ ಧಾರ್ಮಿಕ, ಸಾಮಾಜಿಕ, ಸಾಂಸ್ಕೃತಿಕ ಮತ್ತು ರಾಜಕೀಯ ಸಂಬಂಧಗಳ ಸ್ಥಾಪನೆಗೆ ಆಧಾರವಾಗಬಹುದು.

ಮಾಡುತ್ತೀರಾ? ಹಾಗೂ ನಿಮ್ಮ ಸಮಾರಂಭಗಳಲ್ಲಿ ದುಷ್ಕರ್ಮಗಳನ್ನೆಸಗುತ್ತೀರಾ? " ಅದಕ್ಕೆ- "ನೀನು ಸತ್ಯವಾದಿಯಾಗಿದ್ದರೆ ಅಲ್ಲಾಹನ ಯಾತನೆಯನ್ನು ತಾ" ಎನ್ನುವ ಹೊರತು ಅವರ ಜನಾಂಗದ ಬಳಿ ಬೇರೆ ಉತ್ತರವಿರಲಿಲ್ಲ.

الْمُنْكَرَ ۖ فَمَا كَانَ جَوَابَ قَوْمِهٖٓ اِلَّآ اَنْ قَالُوا ائْتِنَا بِعَذَابِ اللّٰهِ اِنْ كُنْتَ مِنَ الصّٰدِقِيْنَ ﴿٢٩﴾

30. ಆಗ ಲೂತರು, "ನನ್ನ ಪ್ರಭೂ, ಈ ಕಿಡಿಗೇಡಿಗಳ ವಿರುದ್ಧ ನನಗೆ ಸಹಾಯ ನೀಡು" ಎಂದರು.

قَالَ رَبِّ انْصُرْنِيْ عَلَى الْقَوْمِ الْمُفْسِدِيْنَ ﴿٣٠﴾ ع ١٥

31. ನಮ್ಮ ದೂತರು ಇಬ್‌ರಾಹೀಮರ ಬಳಿ ಸುವಾರ್ತೆಯೊಂದಿಗೆ ಬಂದು ತಲಪಿದಾಗ ಅವರು ಇವರೊಡನೆ, "ನಾವು ಈ ನಾಡಿನ ಜನರನ್ನು ನಾಶಗೊಳಿಸುವವರಿದ್ದೇವೆ[9] ಇದರ ನಿವಾಸಿಗಳು ಮಹಾ ಅಕ್ರಮಿಗಳಾಗಿ ಬಿಟ್ಟಿದ್ದಾರೆ" ಎಂದರು.

وَلَمَّا جَآءَتْ رُسُلُنَآ اِبْرٰهِيْمَ بِالْبُشْرٰى ۙ قَالُوْٓا اِنَّا مُهْلِكُوْٓا اَهْلِ هٰذِهِ الْقَرْيَةِ ۚ اِنَّ اَهْلَهَا كَانُوْا ظٰلِمِيْنَ ﴿٣١﴾

32. ಆಗ ಇಬ್‌ರಾಹೀಮರು, "ಅಲ್ಲಿ ಲೂತರಿದ್ದಾರಲ್ಲಾ"! ಎಂದಾಗ ಅವರು, "ಅಲ್ಲಿ ಯಾರ್‍ಯಾರಿದ್ದಾರೆಂಬುದನ್ನು ನಾವು ಚೆನ್ನಾಗಿ ಬಲ್ಲೆವು. ನಾವು ಅವರನ್ನೂ ಅವರ ಪತ್ನಿಯ ಹೊರತು ಅವರ ಮನೆಯವರೆಲ್ಲರನ್ನೂ ರಕ್ಷಿಸಿಕೊಳ್ಳುವೆವು" ಎಂದರು. ಅವರ ಪತ್ನಿ ಹಿಂದೆ ಉಳಿಯುವವರಲ್ಲಾಗಿದ್ದಳು.

قَالَ اِنَّ فِيْهَا لُوْطًا ۖ قَالُوْا نَحْنُ اَعْلَمُ بِمَنْ فِيْهَا ۖ لَنُنَجِّيَنَّهٗ وَاَهْلَهٗٓ اِلَّا امْرَاَتَهٗ ۖ كَانَتْ مِنَ الْغٰبِرِيْنَ ﴿٣٢﴾

33. ಅನಂತರ ನಮ್ಮ ದೂತರು ಲೂತರ ಬಳಿಗೆ ತಲುಪಿದಾಗ ಅವರ ಆಗಮನದಿಂದ ಅವರು(ಲೂತರು) ತುಂಬಾ ಗಾಬರಿ ಮತ್ತು ಕಳವಳಗೊಂಡರು. ಅವರು ಹೇಳಿದರು, "ಹೆದರಬೇಡಿರಿ ಮತ್ತು ವ್ಯಥೆ ಪಡಬೇಡಿರಿ. ಹಿಂದೆ ಉಳಿದು ಬಿಡುವವರಲ್ಲಾಗಿರುವ ನಿಮ್ಮ ಪತ್ನಿಯ ಹೊರತು ನಿಮ್ಮನ್ನೂ ನಿಮ್ಮ ಮನೆಯವರನ್ನೂ ನಾವು ರಕ್ಷಿಸಿಕೊಳ್ಳುವೆವು.

وَلَمَّآ اَنْ جَآءَتْ رُسُلُنَا لُوْطًا سِيْٓءَ بِهِمْ وَضَاقَ بِهِمْ ذَرْعًا وَّقَالُوْا لَا تَخَفْ وَلَا تَحْزَنْ ۣ اِنَّا مُنَجُّوْكَ وَاَهْلَكَ اِلَّا امْرَاَتَكَ كَانَتْ مِنَ الْغٰبِرِيْنَ ﴿٣٣﴾

34. ಇವರು ಮಾಡುತ್ತ ಬಂದಿರುವ ದುಷ್ಕರ್ಮಗಳ ಕಾರಣ ನಾವು ಈ ನಾಡಿನವರ ಮೇಲೆ ಆಕಾಶದಿಂದ ಯಾತನೆಯನ್ನು ಇಳಿಸುವವರಿದ್ದೇವೆ."

اِنَّا مُنْزِلُوْنَ عَلٰٓى اَهْلِ هٰذِهِ الْقَرْيَةِ رِجْزًا مِّنَ السَّمَآءِ بِمَا كَانُوْا يَفْسُقُوْنَ ﴿٣٤﴾

9. 'ಈ ನಾಡು' ಎಂಬುದು ಲೂತ್ ಸಮುದಾಯದ ಪ್ರದೇಶದ ಕಡೆಗೆ ಇರುವ ಸೂಚನೆಯಾಗಿದೆ. ಹ. ಇಬ್‌ರಾಹೀಮ್(ಅ) ಆಗ ಫೆಲಸ್ತೀನಿನ 'ಹಬರೂನ್' (ಇಂದಿನ ಅಲ್‌ಖಲೀಲ್) ನಗರದಲ್ಲಿ ವಾಸಿಸುತ್ತಿದ್ದರು. ಆ ನಗರದ ಪೂರ್ವದಲ್ಲಿ ಕೆಲವು ಮೈಲುಗಳ ಅಂತರದಲ್ಲಿ ಹಿಂದೆ ಲೂತ್‌ರ(ಅ) ಜನಾಂಗ ವಾಸಿಸುತ್ತಿದ್ದ 'ಶಾಂತ ಸಾಗರ'ದ ಆ ಭಾಗವಿದೆ. ಈಗ ಸಾಗರದ ನೀರು ಅದನ್ನು ಆವರಿಸಿಕೊಂಡಿದೆ. ಈ ಪ್ರದೇಶ ತಗ್ಗಿನಲ್ಲಿರುವುದರಿಂದ 'ಹಬರೂನ್'ನ ಪರ್ವತ ಶಿಖರಗಳಿಂದ ಅದು ಸ್ಪಷ್ಟವಾಗಿ ಗೋಚರಿಸುತ್ತದೆ. ಆದ್ದರಿಂದಲೇ ದೇವಚರರು ಅದರೆಡೆಗೆ ಬೊಟ್ಟು ಮಾಡಿ ಪ್ರವಾದಿ ಹ. ಇಬ್‌ರಾಹೀಮ್‌ರೊಡನೆ(ಅ), "ನಾವು ಈ ಪ್ರದೇಶವನ್ನು ನಾಶ ಮಾಡಲಿದ್ದೇವೆ" ಎಂದು ಹೇಳಿದರು.

35. ನಾವು ಬುದ್ಧಿಯನ್ನು ಉಪಯೋಗಿಸುವ ಜನರಿಗಾಗಿ ಆ ನಾಡಿನ ಒಂದು ಬಹಿರಂಗ ನಿದರ್ಶನವನ್ನು[10] ಬಿಟ್ಟಿರುತ್ತೇವೆ.

وَلَقَدْ تَّرَكْنَا مِنْهَآ اٰيَةًۢ بَيِّنَةً
لِّقَوْمٍ يَّعْقِلُوْنَ ﴿٣٥﴾

36. ನಾವು ಮದ್‌ಯನ್‌ನ ಕಡೆಗೆ ಅವರ ಸಹೋದರ ಶುಐಬರನ್ನು ರವಾನಿಸಿದೆವು. ಅವರು, "ನನ್ನ ಜನಾಂಗದವರೇ, ಅಲ್ಲಾಹನ ದಾಸ್ಯ-ಆರಾಧನೆ ಮಾಡಿರಿ. ಅಂತಿಮ ದಿನವನ್ನು ನಿರೀಕ್ಷಿಸಿರಿ. ಮತ್ತು ಭೂಮಿಯಲ್ಲಿ ಕಿಡಿಗೇಡಿಗಳಾಗಿ ಅತಿರೇಕಗಳನ್ನೆಸಗುತ್ತ ತಿರುಗಾಡಬೇಡಿರಿ" ಎಂದರು.

وَاِلٰى مَدْيَنَ اَخَاهُمْ شُعَيْبًا فَقَالَ
يٰقَوْمِ اعْبُدُوا اللّٰهَ وَارْجُوا الْيَوْمَ الْاٰخِرَ
وَلَا تَعْثَوْا فِى الْاَرْضِ مُفْسِدِيْنَ ﴿٣٦﴾

37. ಆದರೆ ಅವರು ಇವರನ್ನು ಸುಳ್ಳಾಗಿಸಿ ಬಿಟ್ಟರು. ಕೊನೆಗೆ ಒಂದು ಉಗ್ರ ಭೂಕಂಪವುಂಟಾಯಿತು ಮತ್ತು ಅವರು ತಮ್ಮ ಮನೆ ಗಳೊಳಗೆ ಬಿದ್ದಲ್ಲೇ ಬಿದ್ದು ಬಿಟ್ಟರು.

فَكَذَّبُوْهُ فَاَخَذَتْهُمُ الرَّجْفَةُ
فَاَصْبَحُوْا فِىْ دَارِهِمْ جٰثِمِيْنَ ﴿٣٧﴾

38. ಆದ್ ಮತ್ತು ಸಮೂದರನ್ನು ನಾವು ನಾಶಗೊಳಿಸಿದ್ದೆವು. ಅವರು ವಾಸಿಸುತ್ತಿದ್ದ ಸ್ಥಳಗಳನ್ನು ನೀವು ನೋಡಿರುತ್ತೀರಿ. ಶೈತಾನನು ಅವರ ಕರ್ಮಗಳನ್ನು ಅವರಿಗೆ ಮನೋಹರವಾಗಿ ಮಾಡಿದನು ಮತ್ತು ಅವರನ್ನು ನೇರ ಮಾರ್ಗದಿಂದ ಸರಿಸಿ ಬಿಟ್ಟನು. ವಸ್ತುತಃ ಅವರು ಬುದ್ಧಿಯುಳ್ಳವರೇ ಆಗಿದ್ದರು.

وَعَادًا وَّثَمُوْدَا۟ وَقَدْ تَّبَيَّنَ لَكُمْ مِّنْ
مَّسٰكِنِهِمْ وَزَيَّنَ لَهُمُ الشَّيْطٰنُ
اَعْمَالَهُمْ فَصَدَّهُمْ عَنِ السَّبِيْلِ
وَكَانُوْا مُسْتَبْصِرِيْنَ ﴿٣٨﴾

39. ಮತ್ತು ಕಾರೂನ್, ಫಿರ್‌ಔನ್ ಹಾಗೂ ಹಾಮಾನ್‌ರನ್ನೂ ನಾವು ನಾಶಗೊಳಿಸಿದೆವು. ಮೂಸಾ, ಅವರ ಬಳಿಗೆ ಪ್ರತ್ಯಕ್ಷ ಪ್ರಮಾಣ ಗಳನ್ನು ತಂದರು. ಆದರೆ, ಅವರು ಭೂಮಿಯಲ್ಲಿ ದುರಹಂಕಾರ ದಿಂದ ಮೆರೆದರು. ವಸ್ತುತಃ ಅವರು ಮೀರಿಸುವವರಾಗಿರಲಿಲ್ಲ.

وَقَارُوْنَ وَفِرْعَوْنَ وَهَامٰنَ وَلَقَدْ
جَآءَهُمْ مُّوْسٰى بِالْبَيِّنٰتِ فَاسْتَكْبَرُوْا
فِى الْاَرْضِ وَمَا كَانُوْا سٰبِقِيْنَ ﴿٣٩﴾

40. ಕೊನೆಗೆ ನಾವು ಪ್ರತಿಯೊಬ್ಬನನ್ನೂ ಅವನ ಪಾಪಗಳಿಗಾಗಿ ಹಿಡಿದೆವು. ತರುವಾಯ ನಾವು ಅವರಲ್ಲಿ ಕೆಲವರ ಮೇಲೆ, ಕಲ್ಲುಗಳ ಮಳೆಗರೆಯುವ ಬಿರುಗಾಳಿಯನ್ನು ಕಳುಹಿಸಿದೆವು. ಇನ್ನು ಕೆಲವರ ಮೇಲೆ ಒಂದು ಭಯಂಕರ ಸ್ಫೋಟವು ಬಂದೆರಗಿತು. ಮತ್ತೆ ಕೆಲವರನ್ನು ನಾವು ಭೂಮಿಯಲ್ಲಿ ಹುದುಗಿಸಿಬಿಟ್ಟೆವು. ಬೇರೆ ಕೆಲವರನ್ನು ಮುಳುಗಿಸಿಬಿಟ್ಟೆವು. ಅಲ್ಲಾಹನು ಅವರ ಮೇಲೆ ಅಕ್ರಮ ವೆಸಗುವವನಾಗಿರಲಿಲ್ಲ. ಆದರೆ ಅವರು ತಾವೇ ತಮ್ಮ ಮೇಲೆ ಅಕ್ರಮವೆಸಗುತ್ತಿದ್ದರು.

فَكُلًّا اَخَذْنَا بِذَنْۢبِهٖ فَمِنْهُمْ مَّنْ اَرْسَلْنَا
عَلَيْهِ حَاصِبًا وَمِنْهُمْ مَّنْ اَخَذَتْهُ
الصَّيْحَةُ وَمِنْهُمْ مَّنْ خَسَفْنَا بِهِ الْاَرْضَ
وَمِنْهُمْ مَّنْ اَغْرَقْنَا وَمَا كَانَ اللّٰهُ لِيَظْلِمَهُمْ
وَلٰكِنْ كَانُوْٓا اَنْفُسَهُمْ يَظْلِمُوْنَ ﴿٤٠﴾

10. ಬಹಿರಂಗ ನಿದರ್ಶನವೆಂದರೆ 'ಮೃತ ಸಾಗರ'(Dead Sea). ಅದನ್ನು 'ಲೂತ್ ಸಮುದ್ರ'ವೆಂದೂ ಹೇಳುತ್ತಾರೆ. ಪವಿತ್ರ ಕುರ್‌ಆನಿನ ಅನೇಕ ಕಡೆಗಳಲ್ಲಿ ಮಕ್ಕಾದ ಸತ್ಯನಿಷೇಧಿಗಳನ್ನುದ್ದೇಶಿಸಿ, "ಆ ಅಕ್ರಮಿ ಜನಾಂಗದ ಮೇಲೆ ಅವರ ಕುಕೃತ್ಯಗಳ ಫಲವಾಗಿ ಬಂದೆರಗಿದ ಯಾತನೆಯ ನಿದರ್ಶನವೊಂದು ಇಂದಿಗೂ ಹೆದ್ದಾರಿಯಲ್ಲಿದೆ. ಅದನ್ನು ನೀವು ಸಿರಿಯಾದ ಕಡೆಗೆ ಮಾಡುವ ವ್ಯಾಪಾರ ಯಾತ್ರೆಯ ವೇಳೆ ಅಹೋರಾತ್ರಿ ನೋಡುತ್ತಿರುತ್ತೀರಿ" ಎಂದು ಹೇಳಲಾಗಿದೆ.

41. ಅಲ್ಲಾಹನನ್ನು ಬಿಟ್ಟು ಬೇರೆ ರಕ್ಷಕ ಮಿತ್ರರನ್ನು ಮಾಡಿಕೊಂಡವರ ಉದಾಹರಣೆಯು ಜೇಡರ ಹುಳುವಿನಂತಿದೆ. ಅದು ತನಗೊಂದು ಮನೆ ಕಟ್ಟುತ್ತದೆ. ಎಲ್ಲ ಮನೆಗಳಿಗಿಂತಲೂ ದುರ್ಬಲವಾದ ಮನೆಯು ಜೇಡರ ಹುಳುವಿನ ಮನೆಯೇ ಆಗಿರುತ್ತದೆ. ಇವರು ಅರಿತಿರುತ್ತಿದ್ದರೆ!

مَثَلُ الَّذِيْنَ اتَّخَذُوْا مِنْ دُوْنِ اللّٰهِ اَوْلِيَآءَ كَمَثَلِ الْعَنْكَبُوْتِ ۚ اِتَّخَذَتْ بَيْتًا ؕ وَ اِنَّ اَوْهَنَ الْبُيُوْتِ لَبَيْتُ الْعَنْكَبُوْتِ ۘ لَوْ كَانُوْا يَعْلَمُوْنَ ﴿٤١﴾

42. ಇವರು ಅಲ್ಲಾಹನನ್ನು ಬಿಟ್ಟು ಯಾವ ವಸ್ತುವನ್ನೇ ಪ್ರಾರ್ಥಿಸಿದರೂ ಅಲ್ಲಾಹನು ಅದನ್ನು ಚೆನ್ನಾಗಿ ತಿಳಿದಿರುತ್ತಾನೆ. ಅವನೇ ಪ್ರಬಲನೂ ಯುಕ್ತಿಪೂರ್ಣನೂ ಆಗಿರುತ್ತಾನೆ.

اِنَّ اللّٰهَ يَعْلَمُ مَا يَدْعُوْنَ مِنْ دُوْنِهٖ مِنْ شَيْءٍ ؕ وَهُوَ الْعَزِيْزُ الْحَكِيْمُ ﴿٤٢﴾

43. ನಾವು ಈ ಉಪಮೆಗಳನ್ನು ಜನರಿಗೆ ಬೋಧಿಸಲಿಕ್ಕಾಗಿ ಕೊಡುತ್ತಿದ್ದೇವೆ. ಆದರೆ, ತಿಳುವಳಿಕೆಯುಳ್ಳವರು ಮಾತ್ರ ಇವುಗಳನ್ನು ಅರಿಯಬಲ್ಲರು.

وَ تِلْكَ الْاَمْثَالُ نَضْرِبُهَا لِلنَّاسِ ۚ وَ مَا يَعْقِلُهَآ اِلَّا الْعٰلِمُوْنَ ﴿٤٣﴾

44. ಅಲ್ಲಾಹನು ಭೂಮಿ-ಆಕಾಶಗಳನ್ನು ಸತ್ಯಪೂರ್ಣವಾಗಿ ಸೃಷ್ಟಿಸಿರುತ್ತಾನೆ. ನಿಜಕ್ಕೂ ಇದರಲ್ಲಿ ಸತ್ಯವಿಶ್ವಾಸಿಗಳಿಗೆ ಒಂದು ನಿದರ್ಶನವಿದೆ.

خَلَقَ اللّٰهُ السَّمٰوٰتِ وَالْاَرْضَ بِالْحَقِّ ؕ اِنَّ فِيْ ذٰلِكَ لَاٰيَةً لِّلْمُؤْمِنِيْنَ ﴿٤٤﴾

45. *(ಪೈಗಂಬರರೇ) ನಿಮ್ಮ ಕಡೆಗೆ ದಿವ್ಯವಾಣಿಯ ಮೂಲಕ ಕಳುಹಿ ಸಲ್ಪಟ್ಟಿರುವ ಈ ಗ್ರಂಥವನ್ನು ಪಠಿಸಿರಿ ಮತ್ತು ನಮಾಝನ್ನು ಸಂಸ್ಥಾಪಿಸಿರಿ. ನಿಶ್ಚಯವಾಗಿಯೂ ನಮಾಝ್ ಅಶ್ಲೀಲ ಹಾಗೂ ದುಷ್ಕೃತ್ಯಗಳಿಂದ ತಡೆಯುತ್ತದೆ[11] ಮತ್ತು ಅಲ್ಲಾಹನ ಧ್ಯಾನ ಇದಕ್ಕಿಂತಲೂ ದೊಡ್ಡದು. ನೀವು ಮಾಡುವುದೆಲ್ಲವನ್ನೂ ಅಲ್ಲಾಹನು ಅರಿಯುತ್ತಾನೆ.

اُتْلُ مَآ اُوْحِيَ اِلَيْكَ مِنَ الْكِتٰبِ وَاَقِمِ الصَّلٰوةَ ؕ اِنَّ الصَّلٰوةَ تَنْهٰى عَنِ الْفَحْشَآءِ وَ الْمُنْكَرِ ؕ وَلَذِكْرُ اللّٰهِ اَكْبَرُ ؕ وَ اللّٰهُ يَعْلَمُ مَا تَصْنَعُوْنَ ﴿٤٥﴾

46. ಗ್ರಂಥದವರೊಡನೆ ಉತ್ತಮ ರೀತಿಯಿಂದ ವಿನಾ ಚರ್ಚಿಸಬೇಡಿರಿ - ಆದರೆ ಅವರ ಪೈಕಿ ಅಕ್ರಮಿಗಳ ಹೊರತು[12] ಮತ್ತು

وَلَا تُجَادِلُوْٓا اَهْلَ الْكِتٰبِ اِلَّا بِالَّتِيْ هِيَ اَحْسَنُ ۖ اِلَّا الَّذِيْنَ ظَلَمُوْا مِنْهُمْ

***ಇಲ್ಲಿಂದ 21ನೆಯ ಕಾಂಡ ಆರಂಭ**

11. ಅರ್ಥಾತ್- ಅಶ್ಲೀಲ ಕೆಲಸಗಳಿಂದ ತಡೆಯುವುದು ಒಂದು ಸಣ್ಣ ವಿಷಯವಾಯಿತು. ಅಲ್ಲಾಹನ ದಿಕ್ರ್ ಅರ್ಥಾತ್ ನಮಾಝ್‌ನ ಸತ್ಫಲಗಳು ಅದಕ್ಕಿಂತ ಎಷ್ಟೋ ಹೆಚ್ಚಿದೆ.

12. ಅರ್ಥಾತ್- ಅಕ್ರಮದ ಧೋರಣೆ ತಳೆಯುವವರೊಂದಿಗೆ ಅವರ ಅಕ್ರಮಕ್ಕೆ ಅನುಗುಣವಾಗಿ ಭಿನ್ನ ಧೋರಣೆಯನ್ನೂ ಅನುಸರಿಸಬಹುದು. ಪ್ರತಿ ಬಾರಿ, ಪ್ರತಿ ಸಂದರ್ಭದಲ್ಲಿ ಎಲ್ಲಾ ರೀತಿಯ ಜನರೊಡನೆ ಸುಮಧುರವಾದ ನಿಲುವನ್ನೇ ತಳೆಯಬಾರದು. ಸತ್ಯಪ್ರಚಾರಕನ ಸಜ್ಜನಿಕೆಯನ್ನು ಜಗತ್ತು ದೌರ್ಬಲ್ಯ ಮತ್ತು ದೀನತೆಯೆಂದು ಭಾವಿಸಬಾರದು. ಇಸ್ಲಾಮ್ ತನ್ನ ಅನುಯಾಯಿಗಳಿಗೆ ಸಭ್ಯತೆ, ಶಿಷ್ಟಾಚಾರ

ಅವರೊಡನೆ ಹೇಳಿರಿ; "ನಮ್ಮ ಕಡೆಗೆ ಕಳುಹಿಸಲಾಗಿರುವುದರ ಮೇಲೂ ನಿಮ್ಮ ಕಡೆಗೆ ಕಳುಹಿಸಲಾಗಿದ್ದುದರ ಮೇಲೂ ನಾವು ವಿಶ್ವಾಸವಿರಿಸಿದ್ದೇವೆ. ನಮ್ಮ ದೇವನೂ ನಿಮ್ಮ ದೇವನೂ ಒಬ್ಬನೇ ಮತ್ತು ನಾವು ಅವನ ಮುಸ್ಲಿಮರೇ (ಆಜ್ಞಾನುಸಾರಿಗಳೇ) ಆಗಿರುತ್ತೇವೆ."

وَقُولُوٓا ءَامَنَّا بِٱلَّذِىٓ أُنزِلَ إِلَيْنَا وَ
أُنزِلَ إِلَيْكُمْ وَإِلَٰهُنَا وَإِلَٰهُكُمْ وَٰحِدٌ
وَنَحْنُ لَهُۥ مُسْلِمُونَ ﴿٤٦﴾

47. (ಪೈಗಂಬರರೇ) ನಾವು ಇದೇ ರೀತಿಯಲ್ಲಿ ನಿಮ್ಮ ಕಡೆಗೆ ಗ್ರಂಥ ಅವತೀರ್ಣಗೊಳಿಸಿದ್ದೇವೆ.[13] ಆದುದರಿಂದ ಈ ಮುಂಚೆ ನಾವು ಯಾರಿಗೆ ಗ್ರಂಥ ನೀಡಿದ್ದೆವೋ ಅವರು ಇದರ ಮೇಲೆ ವಿಶ್ವಾಸ ವಿರಿಸುತ್ತಾರೆ[14] ಮತ್ತು ಇವರಲ್ಲಿಯೂ ಅನೇಕರು ಇದರ ಮೇಲೆ ವಿಶ್ವಾಸ ವಿರಿಸುತ್ತಿದ್ದಾರೆ.[15] ಕೇವಲ ಸತ್ಯನಿಷೇಧಿಗಳು ನಮ್ಮ ಸೂಕ್ತಗಳನ್ನು ಧಿಕ್ಕರಿಸುತ್ತಾರೆ.

وَكَذَٰلِكَ أَنزَلْنَآ إِلَيْكَ ٱلْكِتَٰبَ ۚ فَٱلَّذِينَ
ءَاتَيْنَٰهُمُ ٱلْكِتَٰبَ يُؤْمِنُونَ بِهِۦ ۖ وَمِنْ
هَٰٓؤُلَآءِ مَن يُؤْمِنُ بِهِۦ ۚ وَمَا يَجْحَدُ
بِـَٔايَٰتِنَآ إِلَّا ٱلْكَٰفِرُونَ ﴿٤٧﴾

48. (ಪೈಗಂಬರರೇ) ನೀವು ಇದಕ್ಕೆ ಮುಂಚೆ ಯಾವುದೇ ಗ್ರಂಥ ಪಠಿಸುತ್ತಿರಲಿಲ್ಲ ಮತ್ತು ನಿಮ್ಮ ಕೈಯಿಂದ ಬರೆಯುತ್ತಲೂ ಇರಲಿಲ್ಲ. ಹಾಗಾಗುತ್ತಿದ್ದರೆ ಮಿಥ್ಯವಾದಿಗಳು ಸಂಶಯ ಗ್ರಸ್ತ ರಾಗಲು ಸಾಧ್ಯವಿತ್ತು.

وَمَا كُنتَ تَتْلُوا مِن قَبْلِهِۦ مِن كِتَٰبٍ
وَلَا تَخُطُّهُۥ بِيَمِينِكَ ۖ إِذًا لَّٱرْتَابَ
ٱلْمُبْطِلُونَ ﴿٤٨﴾

49. ವಾಸ್ತವದಲ್ಲಿ ಯಾರಿಗೆ ಜ್ಞಾನ ನೀಡಲ್ಪಟ್ಟಿರುವುದೋ ಅವರ ಹೃದಯಗಳಲ್ಲಿ ಈ ಸುಸ್ಪಷ್ಟ ಪ್ರಮಾಣಗಳಿವೆ.[16] ಅಕ್ರಮಿಗಳ ಹೊರತು ಮತ್ತಾರೂ ನಮ್ಮ ನಿದರ್ಶನಗಳನ್ನು ಧಿಕ್ಕರಿಸುವುದಿಲ್ಲ.

بَلْ هُوَ ءَايَٰتٌۢ بَيِّنَٰتٌ فِى صُدُورِ
ٱلَّذِينَ أُوتُوا ٱلْعِلْمَ ۚ وَمَا يَجْحَدُ
بِـَٔايَٰتِنَآ إِلَّا ٱلظَّٰلِمُونَ ﴿٤٩﴾

50. "ಇವನ ಪ್ರಭುವಿನ ಕಡೆಯಿಂದ ಇವನ ಮೇಲೆ ನಿದರ್ಶನಗಳೇಕೆ ಇಳಿಸಲ್ಪಡಲಿಲ್ಲ?" ಎಂದು ಇವರು ಕೇಳುತ್ತಾರೆ. ಹೇಳಿರಿ,

وَقَالُوا لَوْلَآ أُنزِلَ عَلَيْهِ ءَايَٰتٌ مِّن
رَّبِّهِۦ ۖ قُلْ إِنَّمَا ٱلْءَايَٰتُ عِندَ ٱللَّهِ ۖ وَ

ಮತ್ತು ವಿಚಾರಶೀಲತೆಯನ್ನು ಕಲಿಸುತ್ತಿದೆ ನಿಜ. ಆದರೆ ಪ್ರತಿಯೊಬ್ಬ ಅಕ್ರಮಿಯೊಡನೆಯೂ ಮೃಧು ಸ್ವಭಾವವನ್ನೇ ಅನುಸರಿಸುವಂತಹ ವಿನಮ್ರತೆ ಮತ್ತು ದೈನ್ಯತೆಯನ್ನು ಕಲಿಸುವುದಿಲ್ಲ.

13. ಇದಕ್ಕೆ ಎರಡು ಅರ್ಥಗಳಿರಲು ಸಾಧ್ಯ. ಮೊದಲನೆಯದಾಗಿ ಹಿಂದಿನ ಪ್ರವಾದಿಗಳಿಗೆ ಗ್ರಂಥವನ್ನು ಅವತೀರ್ಣಗೊಳಿಸಿದಂತೆ ಈಗ ಈ ಗ್ರಂಥವನ್ನು ನಿಮ್ಮ ಮೇಲೆ ಅವತೀರ್ಣ ಗೊಳಿಸಿದ್ದೇವೆ. ಎರಡನೆಯದಾಗಿ ಹಿಂದಿನ ಎಲ್ಲಾ ಗ್ರಂಥಗಳ ನಿರಾಕರಣೆಯ ಬದಲು ಅದನ್ನು ಸಮ್ಮತಿಸುತ್ತಲೇ ಈ ಗ್ರಂಥದ ಮೇಲೆ ವಿಶ್ವಾಸವಿಡಬೇಕೆಂಬ ಬೋಧನೆಯೊಂದಿಗೆ ನಾವು ಇದನ್ನು ಅವತೀರ್ಣಗೊಳಿಸಿದ್ದೇವೆ.

14. ಗ್ರಂಥದವರ ಪೈಕಿ ಎಲ್ಲರೂ ಅಲ್ಲ. ಬದಲಾಗಿ ದಿವ್ಯ ಗ್ರಂಥಗಳ ನೈಜ ಪರಿಜ್ಞಾನವಿದ್ದ ಮತ್ತು ನಿಜಾರ್ಥದಲ್ಲಿ ಗ್ರಂಥದವರಾಗಿದ್ದ ಜನರು ಎಂದು ಹಿನ್ನೆಲೆಯಿಂದ ವ್ಯಕ್ತವಾಗುತ್ತದೆ.

15. ಇಲ್ಲಿ ಅರಬ್ ನಿವಾಸಿಗಳ ಕುರಿತು 'ಇವರಲ್ಲಿಯೂ' ಎಂದು ಹೇಳಲಾಗಿದೆ. ಸತ್ಯಪ್ರಿಯ ವ್ಯಕ್ತಿಗಳು ಎಲ್ಲೆಡೆಯೂ ವಿಶ್ವಾಸ ಸ್ವೀಕರಿಸುತ್ತಿದ್ದಾರೆ. ಅವರು ಗ್ರಂಥದವರ ಪೈಕಿಯವರಾಗಿದ್ದರೂ ಅಲ್ಲದಿದ್ದರೂ ಸರಿಯೇ ಎಂಬುದು ಇದರ ಇಂಗಿತ.

16. ಅರ್ಥಾತ್- ನಿರಕ್ಷರಿಯೊಬ್ಬರು ಕುರ್‌ಆನಿನಂತಹ ಉದ್ಗ್ರಂಥವನ್ನು ಸಮರ್ಪಿಸುವುದು ಮತ್ತು ಏಕಾಏಕಿಯಾಗಿ ಯಾವುದೇ ಪೂರ್ವಸಿದ್ಧತೆಯ ಕುರುಹನ್ನೂ ಯಾರೂ ಕಂಡಿರದಂತಹ ಅಸಾಮಾನ್ಯ ಚಮತ್ಕಾರಗಳನ್ನು ಪ್ರದರ್ಶಿಸುವುದು ಸ್ವತಃ ಬುದ್ಧಿಮತ್ತೆ ಮತ್ತು ದೃಷ್ಟಿ ಇರುವವರಿಗೆ ಅವರ ಪ್ರವಾದಿತ್ವದ ಸಾಕ್ಷ್ಯ ವಹಿಸುವ ಸುವ್ಯಕ್ತ ದೃಷ್ಟಾಂತಗಳಾಗಿ ಗೋಚರಿಸುತ್ತವೆ.

"ನಿದರ್ಶನಗಳಂತೂ ಅಲ್ಲಾಹನ ಬಳಿ ಇವೆ. ನಾನು ಕೇವಲ ಸುಸ್ಪಷ್ಟ ಎಚ್ಚರಿಕೆ ನೀಡುವವನು ಮಾತ್ರ."

إِنَّمَآ أَنَا نَذِيرٌ مُّبِينٌ ﴿٥٠﴾

51. ನಾವು ಇವರಿಗೆ ಓದಿ ಹೇಳಲಾಗುತ್ತಿರುವ ಗ್ರಂಥವನ್ನು ನಿಮ್ಮ ಮೇಲೆ ಅವತೀರ್ಣಗೊಳಿಸಿರುವುದು ಇವರಿಗೆ (ನಿದರ್ಶನಕ್ಕೆ) ಸಾಕಾಗದೇ? ನಿಶ್ಚಯವಾಗಿಯೂ ಸತ್ಯವಿಶ್ವಾಸವಿರಿಸುವವರಿಗೆ ಇದರಲ್ಲಿ ಕೃಪೆ ಹಾಗೂ ಉಪದೇಶವಿದೆ.

أَوَلَمْ يَكْفِهِمْ أَنَّآ أَنزَلْنَا عَلَيْكَ الْكِتَٰبَ يُتْلَىٰ عَلَيْهِمْ ۚ إِنَّ فِى ذَٰلِكَ لَرَحْمَةً وَذِكْرَىٰ لِقَوْمٍ يُؤْمِنُونَ ﴿٥١﴾

52. (ಪೈಗಂಬರರೇ) "ನನ್ನ ಮತ್ತು ನಿಮ್ಮ ನಡುವೆ ಸಾಕ್ಷ್ಯಕ್ಕೆ ಅಲ್ಲಾಹನೇ ಸಾಕು. ಅವನು ಭೂಮಿ-ಆಕಾಶಗಳಲ್ಲಿ ಎಲ್ಲವನ್ನೂ ಬಲ್ಲವನು. ಮಿಥ್ಯದ ಮೇಲೆ ವಿಶ್ವಾಸವಿರಿಸುವವರು ಮತ್ತು ಅಲ್ಲಾಹನನ್ನು ನಿಷೇಧಿಸುವವರೇ ನಷ್ಟದಲ್ಲಿರುವವರಾಗಿರುತ್ತಾರೆ."

قُلْ كَفَىٰ بِاللَّهِ بَيْنِى وَبَيْنَكُمْ شَهِيدًا ۖ يَعْلَمُ مَا فِى السَّمَٰوَٰتِ وَالْأَرْضِ ۗ وَالَّذِينَ ءَامَنُوا بِالْبَٰطِلِ وَكَفَرُوا بِاللَّهِ أُولَٰٓئِكَ هُمُ الْخَٰسِرُونَ ﴿٥٢﴾

53. ಇವರು ನಿಮ್ಮೊಡನೆ ಯಾತನೆಯನ್ನು ಬೇಗನೇ ತರಬೇಕೆಂದು ಆಗ್ರಹಿಸುತ್ತಾರೆ. ಒಂದು ಸಮಯವು ನಿಶ್ಚಯಿಸಲ್ಪಡದಿರುತ್ತಿದ್ದರೆ ಇವರ ಮೇಲೆ ಯಾತನೆ ಇಷ್ಟರಲ್ಲೇ ಬಂದು ಬಿಡುತ್ತಿತ್ತು ಮತ್ತು ನಿಶ್ಚಯವಾಗಿಯೂ ಅದು (ತಕ್ಕ ಸಮಯದಲ್ಲಿ) ಹಠಾತ್ತಾಗಿ, ಇವರಿಗೆ ಸುಳಿವೂ ಇಲ್ಲದ ವೇಳೆಯಲ್ಲಿ ಬಂದೇ ತೀರುವುದು.

وَيَسْتَعْجِلُونَكَ بِالْعَذَابِ ۚ وَلَوْلَآ أَجَلٌ مُّسَمًّى لَّجَآءَهُمُ الْعَذَابُ ۚ وَلَيَأْتِيَنَّهُم بَغْتَةً وَهُمْ لَا يَشْعُرُونَ ﴿٥٣﴾

54. ಇವರು ನಿಮ್ಮೊಡನೆ ಯಾತನೆಯನ್ನು ಬೇಗನೆ ತರಬೇಕೆಂದು ಆಗ್ರಹಿಸುತ್ತಾರೆ. ವಸ್ತುತಃ ನರಕವು ಈ ಸತ್ಯನಿಷೇಧಿಗಳನ್ನು ಸುತ್ತುವರಿದು ಬಿಟ್ಟಿದೆ.

يَسْتَعْجِلُونَكَ بِالْعَذَابِ ۚ وَإِنَّ جَهَنَّمَ لَمُحِيطَةٌۢ بِالْكَٰفِرِينَ ﴿٥٤﴾

55. ಯಾತನೆಯು ಇವರನ್ನು ಮೇಲ್ಭಾಗದಿಂದಲೂ ಕಾಲಿನಡಿಯಿಂದಲೂ ಆವರಿಸಿಕೊಂಡ ದಿನ ಮತ್ತು ಅದು "ನೀವು ಮಾಡುತ್ತಿದ್ದ ದುಷ್ಕೃತ್ಯಗಳ ಸವಿಯನ್ನುಣ್ಣಿರಿ ಎನ್ನುವಾಗ (ಇವರಿಗೆ ತಿಳಿದೀತು)".

يَوْمَ يَغْشَىٰهُمُ الْعَذَابُ مِن فَوْقِهِمْ وَمِن تَحْتِ أَرْجُلِهِمْ وَيَقُولُ ذُوقُوا مَا كُنتُمْ تَعْمَلُونَ ﴿٥٥﴾

56. ಸತ್ಯವಿಶ್ವಾಸಿಗಳಾದ ಓ ನನ್ನ ದಾಸರೇ! ನನ್ನ ಭೂಮಿ ವಿಶಾಲವಾಗಿದೆ. ಆದುದರಿಂದ ನೀವು ನನ್ನ ದಾಸ್ಯ-ಆರಾಧನೆಯನ್ನೇ ಮಾಡಿರಿ.[17]

يَٰعِبَادِىَ الَّذِينَ ءَامَنُوٓا إِنَّ أَرْضِى وَٰسِعَةٌ فَإِيَّٰىَ فَاعْبُدُونِ ﴿٥٦﴾

57. ಪ್ರತಿಯೊಂದು ಜೀವಿಗೂ ಮೃತ್ಯುವಿನ ರುಚಿಯನ್ನು ಸವಿಯಲಿಕ್ಕಿದೆ. ತರುವಾಯ ನೀವೆಲ್ಲರೂ ನಮ್ಮ ಕಡೆಗೆ ಮರಳಿಸಿ ತರಲ್ಪಡುವಿರಿ.

كُلُّ نَفْسٍ ذَآئِقَةُ الْمَوْتِ ۖ ثُمَّ إِلَيْنَا تُرْجَعُونَ ﴿٥٧﴾

17. ಇದು ಹಿಜ್ರತ್‌ನ ಕಡೆಗಿರುವ ಸೂಚನೆ. ಅರ್ಥಾತ್ ಮಕ್ಕಾದಲ್ಲಿ ದೇವನ ದಾಸ್ಯ ದುಸ್ತರವಾಗುತ್ತಿದ್ದರೆ ದೇಶ ಬಿಟ್ಟು ಹೊರಡಿರಿ. ದೇವನ ಭೂಮಿ ಇಕ್ಕಟ್ಟಾಗಿಲ್ಲ. ದೇವನ ದಾಸರಾಗಿ ಇರಲು ಎಲ್ಲಿ ಸಾಧ್ಯವಿದೆಯೋ ಅಲ್ಲಿಗೆ ಹೊರಟು ಹೋಗಿರಿ.

58. ಸತ್ಯವಿಶ್ವಾಸ ಸ್ವೀಕಾರ ಮಾಡಿದವರನ್ನೂ, ಸತ್ಕರ್ಮವೆಸಗಿದವರನ್ನೂ ನಾವು ಸ್ವರ್ಗದ ಅತ್ಯುತ್ತಮ ಭವನಗಳಲ್ಲಿರಿಸುವೆವು. ಅವುಗಳ ತಳಭಾಗದಲ್ಲಿ ಕಾಲುವೆಗಳು ಹರಿಯುತ್ತಿರುವುವು. ಅಲ್ಲಿ ಅವರು ಸದಾ ಕಾಲ ವಾಸಿಸುವರು. ಸತ್ಕರ್ಮವೆಸಗುವವರಿಗೆ ಅದೆಷ್ಟು ಉತ್ತಮ ಸತ್ಫಲ!

وَالَّذِينَ آمَنُوا وَعَمِلُوا الصَّالِحَاتِ
لَنُبَوِّئَنَّهُمْ مِنَ الْجَنَّةِ غُرَفًا تَجْرِي
مِنْ تَحْتِهَا الْأَنْهَارُ خَالِدِينَ فِيهَا ۚ
نِعْمَ أَجْرُ الْعَامِلِينَ ﴿٥٨﴾

59. ತಾಳ್ಮೆ ವಹಿಸಿದವರಿಗೆ ಮತ್ತು ತಮ್ಮ ಪ್ರಭುವಿನ ಮೇಲೆ ಭರವಸೆಯನ್ನಿರಿಸುವವರಿಗೆ!

الَّذِينَ صَبَرُوا وَعَلَىٰ رَبِّهِمْ يَتَوَكَّلُونَ ﴿٥٩﴾

60. ತಮ್ಮ ಆಹಾರವನ್ನು ಹೊತ್ತುಕೊಂಡು ತಿರುಗಾಡದಿರುವ ಎಷ್ಟೋ ಪ್ರಾಣಿಗಳಿವೆ. ಅಲ್ಲಾಹನು ಅವುಗಳಿಗೆ ಅಹಾರ ಕೊಡುತ್ತಾನೆ, ನಿಮ್ಮ ಅನ್ನದಾತನೂ ಅವನೇ. ಅವನು ಸರ್ವಶ್ರುತನೂ ಸರ್ವಜ್ಞನೂ ಆಗಿರುತ್ತಾನೆ.

وَكَأَيِّنْ مِنْ دَابَّةٍ لَا تَحْمِلُ رِزْقَهَا
اللَّهُ يَرْزُقُهَا وَإِيَّاكُمْ ۚ وَهُوَ السَّمِيعُ الْعَلِيمُ ﴿٦٠﴾

61. ನೀವು[18] ಭೂಮಿ-ಆಕಾಶಗಳನ್ನು ಯಾರು ಸೃಷ್ಟಿಸಿದನೆಂದೂ ಸೂರ್ಯ ಚಂದ್ರರನ್ನು ಯಾರು ನಿಯಂತ್ರಿಸಿರುತ್ತಾನೆಂದೂ ಇವರೊಡನೆ ಕೇಳಿದರೆ ಇವರು ಖಂಡಿತ 'ಅಲ್ಲಾಹನು' ಎನ್ನುವರು. ಹಾಗಾದರೆ ಇವರು ಮೋಸ ಹೋಗುತ್ತಿರುವುದೆಲ್ಲಿಂದ?

وَلَئِنْ سَأَلْتَهُمْ مَنْ خَلَقَ السَّمَاوَاتِ
وَالْأَرْضَ وَسَخَّرَ الشَّمْسَ وَالْقَمَرَ
لَيَقُولُنَّ اللَّهُ ۖ فَأَنَّىٰ يُؤْفَكُونَ ﴿٦١﴾

62. ಅಲ್ಲಾಹನೇ ತನ್ನ ದಾಸರ ಪೈಕಿ, ತಾನಿಚ್ಛಿಸಿದವನ ಜೀವನಾಧಾರವನ್ನು ವಿಸ್ತೃತಗೊಳಿಸುತ್ತಾನೆ ಮತ್ತು ತಾನಿಚ್ಛಿಸಿದವರಿಗೆ ಅದನ್ನು ಸಂಕುಚಿತಗೊಳಿಸುತ್ತಾನೆ. ನಿಶ್ಚಯವಾಗಿಯೂ ಅಲ್ಲಾಹನು ಸಕಲ ವಸ್ತುಗಳನ್ನೂ ಬಲ್ಲವನಾಗಿದ್ದಾನೆ.

اللَّهُ يَبْسُطُ الرِّزْقَ لِمَنْ يَشَاءُ مِنْ
عِبَادِهِ وَيَقْدِرُ لَهُ ۚ إِنَّ اللَّهَ بِكُلِّ
شَيْءٍ عَلِيمٌ ﴿٦٢﴾

63. ಆಕಾಶದಿಂದ ನೀರನ್ನು ಸುರಿಸಿದವನೂ ಅದರ ಮೂಲಕ, ನಿರ್ಜೀವವಾಗಿ ಬಿದ್ದಿರುವ ಭೂಮಿಯನ್ನು ಸಜೀವಗೊಳಿಸಿದವನೂ ಯಾರೆಂದು ನೀವು ಇವರೊಡನೆ ಕೇಳಿದರೆ, ಇವರು ಖಂಡಿತವಾಗಿಯೂ ಅಲ್ಲಾಹನೆನ್ನುವರು. "ಸರ್ವಸ್ತುತಿಗಳೂ ಅಲ್ಲಾಹನಿಗೇ ಮೀಸಲು" ಎನ್ನಿರಿ.[19] ಆದರೆ ಇವರಲ್ಲಿ ಹೆಚ್ಚಿನವರು ಗ್ರಹಿಸುವುದಿಲ್ಲ.

وَلَئِنْ سَأَلْتَهُمْ مَنْ نَزَّلَ مِنَ السَّمَاءِ
مَاءً فَأَحْيَا بِهِ الْأَرْضَ مِنْ بَعْدِ
مَوْتِهَا لَيَقُولُنَّ اللَّهُ ۚ قُلِ الْحَمْدُ
لِلَّهِ ۚ بَلْ أَكْثَرُهُمْ لَا يَعْقِلُونَ ﴿٦٣﴾

18. ಇಲ್ಲಿಂದ ಪುನಃ ಮಕ್ಕಾದ ಸತ್ಯನಿಷೇಧಿಗಳನ್ನು ಸಂಬೋಧಿಸಲಾಗಿದೆ.

19. ಇಲ್ಲಿ 'ಅಲ್‌ಹಮ್ದುಲಿಲ್ಲಾಹ್' ಎಂಬ ಪದ ಎರಡು ಅರ್ಥಗಳನ್ನು ಕೊಡುತ್ತದೆ. ಮೊದಲನೆಯದಾಗಿ ಈ ಕೆಲಸಗಳೆಲ್ಲವೂ ಅಲ್ಲಾಹನದ್ದಾಗಿರುವುದರಿಂದ ಅವನೇ ಸ್ತುತಿಸ್ತೋತ್ರಗಳಿಗೆ ಅರ್ಹನು. ಇತರರಿಗೆ ಸ್ತುತಿಸ್ತೋತ್ರಗಳ ಹಕ್ಕು ಸಲ್ಲುವುದಾದರೂ ಹೇಗೆ? ಎರಡನೆಯದಾಗಿ ನೀವು ಸ್ವತಃ ಈ ವಿಷಯವನ್ನು ಸಮ್ಮತಿಸುತ್ತೀರಿ ಅಲ್ಲಾಹನಿಗೆ ಸ್ತುತಿ.

64. ಈ ಲೌಕಿಕ ಜೀವನವು ಒಂದು ಆಟ ಮತ್ತು ಮನೋರಂಜನೆಯಲ್ಲದೆ ಇನ್ನೇನೂ ಅಲ್ಲ. ನೈಜ ಜೀವನ ಗೃಹವು ಪರಲೋಕ ಗೃಹವೇ ಆಗಿದೆ. ಇವರು ಅರಿಯುತ್ತಿದ್ದರೆ!

وَمَا هٰذِهِ الْحَيٰوةُ الدُّنْيَآ اِلَّا لَهْوٌ وَّلَعِبٌ ؕ وَاِنَّ الدَّارَ الْاٰخِرَةَ لَهِىَ الْحَيَوَانُ ۘ لَوْ كَانُوْا يَعْلَمُوْنَ ﴿٦٤﴾

65-66. ಇವರು ನಾವೆಯಲ್ಲಿ ಪ್ರಯಾಣಿಸುವಾಗ ತಮ್ಮ ಧರ್ಮವನ್ನು ಅಲ್ಲಾಹನಿಗೆ ಮೀಸಲಾಗಿಸಿಟ್ಟು ಅವನನ್ನು ಪ್ರಾರ್ಥಿಸುತ್ತಾರೆ. ತರುವಾಯ ಅವನು ಇವರನ್ನು ಸಂರಕ್ಷಿಸಿ ದಡಕ್ಕೆ ತಂದಾಗ ಒಮ್ಮೆಲೇ ಇವರು ಅಲ್ಲಾಹನಿಂದ ನೀಡಲ್ಪಟ್ಟ ಸಂರಕ್ಷಣೆಗೆ ಕೃತಘ್ನತೆ ತೋರಲಿಕ್ಕಾಗಿ ಮತ್ತು(ಲೌಕಿಕ ಜೀವನದ) ಸವಿಯನ್ನು ಅನುಭವಿಸಲಿಕ್ಕಾಗಿ 'ದೇವ ಸಹಭಾಗಿತ್ವ' ಎಸಗತೊಡಗುತ್ತಾರೆ. ಸರಿ, ಸದ್ಯದಲ್ಲೇ ಇವರಿಗೆ ತಿಳಿದೀತು.

فَاِذَا رَكِبُوْا فِى الْفُلْكِ دَعَوُا اللّٰهَ مُخْلِصِيْنَ لَهُ الدِّيْنَ ۚ فَلَمَّا نَجّٰىهُمْ اِلَى الْبَرِّ اِذَا هُمْ يُشْرِكُوْنَ ﴿٦٥﴾ لِيَكْفُرُوْا بِمَآ اٰتَيْنٰهُمْ ۚۙ وَلِيَتَمَتَّعُوْا ٚ فَسَوْفَ يَعْلَمُوْنَ ﴿٦٦﴾

67. ನಾವು ಒಂದು ಶಾಂತಿಪೂರ್ಣ 'ಹರಮ್' (ಸನ್ಮಾನ್ಯ ಸ್ಥಳ) ಮಾಡಿರುವುದನ್ನು ಇವರು ನೋಡುವುದಿಲ್ಲವೇ? ವಸ್ತುತಃ ಇವರ ಆಸುಪಾಸಿನಲ್ಲಿ ಜನರು ಅಪಹರಿಸಲ್ಪಡುತ್ತಾರೆ.[20] ಹೀಗಿದ್ದೂ ಇವರು ಮಿಥ್ಯದ ಮೇಲೆ ವಿಶ್ವಾಸವಿರಿಸಿ ಅಲ್ಲಾಹನ ಕೊಡುಗೆಯ ಬಗ್ಗೆ ಕೃತಘ್ನರಾಗುತ್ತಾರೆಯೇ?

اَوَلَمْ يَرَوْا اَنَّا جَعَلْنَا حَرَمًا اٰمِنًا وَّيُتَخَطَّفُ النَّاسُ مِنْ حَوْلِهِمْ ؕ اَفَبِالْبَاطِلِ يُؤْمِنُوْنَ وَبِنِعْمَةِ اللّٰهِ يَكْفُرُوْنَ ﴿٦٧﴾

68. ಅಲ್ಲಾಹನ ಮೇಲೆ ಸುಳ್ಳಾರೋಪ ಹೊರಿಸುವವನಿಗಿಂತ ಅಥವಾ ಸತ್ಯವು ತನ್ನ ಬಳಿ ಬಂದಾಗ ಅದನ್ನು ಸುಳ್ಳಾಗಿಸುವವನಿಗಿಂತ ದೊಡ್ಡ ಅಕ್ರಮಿ ಯಾರಿರಬಹುದು? ಇಂತಹ ಸತ್ಯನಿಷೇಧಿಗಳ ವಾಸಸ್ಥಾನ ನರಕವೇ ಅಲ್ಲವೇ?

وَمَنْ اَظْلَمُ مِمَّنِ افْتَرٰى عَلَى اللّٰهِ كَذِبًا اَوْ كَذَّبَ بِالْحَقِّ لَمَّا جَآءَهٗ ؕ اَلَيْسَ فِىْ جَهَنَّمَ مَثْوًى لِّلْكٰفِرِيْنَ ﴿٦٨﴾

69. ನಮಗಾಗಿ ಹೋರಾಡುವವರಿಗೆ ನಾವು ನಮ್ಮ ಮಾರ್ಗಗಳನ್ನು ತೋರಿಸಿ ಕೊಡುವೆವು[21] ಮತ್ತು ನಿಶ್ಚಯವಾಗಿಯೂ ಅಲ್ಲಾಹ್ ಸಜ್ಜನರ ಜೊತೆಯಲ್ಲೇ ಇದ್ದಾನೆ.

وَالَّذِيْنَ جَاهَدُوْا فِيْنَا لَنَهْدِيَنَّهُمْ سُبُلَنَا ؕ وَاِنَّ اللّٰهَ لَمَعَ الْمُحْسِنِيْنَ ﴿٦٩﴾

---

20. ಅರ್ಥಾತ್- ಅವರಿಗೆ ಪರಮಾವಧಿ ಶಾಂತಿ ಪ್ರಾಪ್ತವಿರುವ ಈ ಮಕ್ಕಾ ನಗರವನ್ನು 'ಹರಮ್' ಅಥವಾ ಪವಿತ್ರ ಸ್ಥಳವನ್ನಾಗಿ ಮಾಡಿರುವುದು ಯಾವುದಾದರೂ ಲಾತ್ ಮತ್ತು ಹುಬುಲ್‌ಗಳೇ? ಅರೇಬಿಯಾದ ಅತ್ಯಂತ ಅಶಾಂತ ಪರಿಸ್ಥಿತಿಯಲ್ಲಿ ಎರಡೂವರೆ ಸಾವಿರ ವರ್ಷಗಳ ಕಾಲ ಆ ಪ್ರದೇಶವನ್ನು ಎಲ್ಲಾ ವಿಧದ ಕ್ಷೋಭೆಯಿಂದ ಸುರಕ್ಷಿತವಾಗಿರಿಸಿದವರು ಯಾರು? ಅದರ ಪಾವಿತ್ರ್ಯವನ್ನು ಕಾಪಾಡಿದವರು ನಾವಲ್ಲದೆ ಮತ್ಯಾರು?

21. ಅರ್ಥಾತ್- ಅಲ್ಲಾಹನ ಮಾರ್ಗದಲ್ಲಿ ಪ್ರಾಮಾಣಿಕತೆಯೊಂದಿಗೆ ಸಮಸ್ತ ಜಗತ್ತಿನೊಡನೆ ಸಂಘರ್ಷಕ್ಕಿಳಿಯುವ ಅಪಾಯವನ್ನು ತಂದೊಡ್ಡಿಕೊಳ್ಳುವವರನ್ನು ಅಲ್ಲಾಹನು ಹಾಗೆಯೇ ಬಿಟ್ಟು ಬಿಡುವುದಿಲ್ಲ. ಅವರ ಕೈಹಿಡಿದು ಅವರಿಗೆ ಮಾರ್ಗದರ್ಶನವೀಯುತ್ತಾನೆ. ತನ್ನೆಡೆಗೆ ಬರುವ ದಾರಿಗಳನ್ನು ಅವರ ಪಾಲಿಗೆ ಸುಗಮಗೊಳಿಸುತ್ತಾನೆ. ಯಾವ ರೀತಿ ತನ್ನ ಸಂಪ್ರೀತಿಗಳಿಸ ಬಹುದೆಂಬುದನ್ನು ಅವನು ಹೆಜ್ಜೆಹೆಜ್ಜೆಗೂ ತಿಳಿಸುತ್ತಾನೆ. ಸನ್ಮಾರ್ಗ ಎಲ್ಲಿದೆ, ದುರ್ಮಾರ್ಗಗಳು ಯಾವುವು ಎಂಬುದರ ಬಗ್ಗೆ ಅವನು ಪ್ರತಿಯೊಂದು ಹಂತದಲ್ಲೂ ಬೆಳಕು ಚೆಲ್ಲುತ್ತಾನೆ. ಅವರಲ್ಲಿ ಎಷ್ಟು ಸಂಕಲ್ಪಶುದ್ಧಿ ಮತ್ತು ಹಿತಾಕಾಂಕ್ಷೆ ಇರುತ್ತದೋ ಅಲ್ಲಾಹನ ಸಹಾಯ, ಸೌಭಾಗ್ಯ ಮತ್ತು ಸನ್ಮಾರ್ಗದರ್ಶನವೂ ಅಷ್ಟೇ ಪ್ರಮಾಣದಲ್ಲಿ ಅವರ ಜತೆಗಿರುತ್ತದೆ.